ನಕ್ಕುಬಿಡಿ




ಪತ್ನಿ: ನೀವು ನನ್ನನ್ನು ಎಷ್ಟು ಪ್ರೀತಿಸುತ್ತೀರೆಂದು ತಿಳಿಸುವಿರಾ ಡಾರ್ಲಿಂಗ್?

ಪತಿ: ನಿನ್ನನ್ನು ನಾನು ಅದೆಷ್ಟು ಪ್ರೀತಿಸುವೆನೆಂದರೆ, ನೀನು ಕುಡಿದು ಬಿಟ್ಟಿರುವ ವಿಷವನ್ನೂ ನಾನು ಕುಡಿಯ ಬಲ್ಲೆ: ವಿಶ್ವಾಸವಿಲ್ಲದಿದ್ದರೆ ಒಮ್ಮೆ ಕುಡಿದು ಮಿಕ್ಕಿದ್ದನ್ನು ಕೊಟ್ಟು ನೋಡು!

★★★

ಗೋಪಿ: ದಿನಾ ರಾತ್ರಿ ಮಲಗುವ ಮುನ್ನ ನಾನು ಅಡುಗೆ ಗ್ಯಾಸ್ ಸಿಲಿಂಡರಿನ ರೆಗ್ಯುಲೇಟರ್ ಬಂದ್ ಇದೆಯೋ ಇಲ್ಲವೋ ಎಂದು ಖಾತ್ರಿ ಮಾಡಿಕೊಳ್ಳುತ್ತೇನೆ.

ರಾಮು: ಏಕೆ, ನಿನಗೆ ನಿನ್ನ ಪತ್ನಿಯ ಮೇಲೆ ಅಷ್ಟೂ ವಿಶ್ವಾಸವಿಲ್ಲವೆ?

ಗೋಪಿ: ನನಗೇನೋ ಇದೆ; ಆದರೆ ಆಕೆಗಿಲ್ಲವಲ್ಲಾ ನನ್ನ ಮೇಲೆ ವಿಶ್ವಾಸ...!

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್

## ಸೊಳ್ಳೆ ಕಡಿತ



ಡಾಕ್ಟರ್: ಮುಖ ಇಷ್ಟೊಂದು ಡ್ಯಾಮೇಜ್ ಹೇಗಾಯ್ತು?

ಗುಂಡ: ಸೊಳ್ಳೆ ಕಡಿದಿದ್ರಿಂದ ಸಾರ್ ...

ಡಾಕ್ಟರ್: ಸೊಳ್ಳೆ ಕಡಿದ್ರೆ ಇಷ್ಟೊಂದು ಪೆಟ್ಟಾಗುತ್ತಾ?

ಗುಂಡ: ಇಲ್ಲಾ... ಸೊಳ್ಳೆ ನನ್ನ ಮುಖದ ಮೇಲೆ ಕೂತ ಕೂಡಲೆ ನನ್ನ ಹೆಂಡ್ತಿ ಲಟ್ಟಣಿಗೆ ಎಸೆದ್ಲು ಅಷ್ಟೆ.

★★★

## ಕೋಟ್ಯಾಧಿಪತಿಯಲ್ಲಿ...

ಟಿವಿ ನಿರೂಪಕ: ನಿಮ್ಮ ಹೆಂಡ್ತಿ ಮಲಗಿದ್ದಾಗ ಹೇಗೆ ಕಾಣ್ತಾರೆ?

ಎ. ಸಿಟ್ಟಾಗಿ; ಬಿ. ಶಾಂತವಾಗಿ; ಸಿ. ಸುಂದರವಾಗಿ; ಡಿ. ಬೇಜಾರಾಗಿ.

ಮಂಟಾ: ಫೋನ್ ಎ ಫ್ರೆಂಡ್ ಆಪ್ಷನ್ ಕೊಡ್ತೀರಾ?

ಸಂಗ್ರಹ: ಸುಮಾ ಕಳಸಾಪುರ

## ಎಷ್ಟು ಹೊಲ?



ಭಾರತೀಯ ರೈತನೊಬ್ಬ ಅಮೇರಿಕಾ ಪ್ರವಾಸದಲ್ಲಿ ಅಲ್ಲಿನ ಫಾರ್ಮ್ ಒಂದನ್ನು ನೋಡಲು ಹೋದ.

'ಈ ಫಾರ್ಮ್ ಎಷ್ಟು ಎಕರೆಗಳಿವೆ', ಭಾರತೀಯ ರೈತ ಕೇಳಿದ.

'ಸರಿಯಾಗಿ ಗೊತ್ತಿಲ್ಲ. ನಮ್ಮ ಗಾಡಿಯಲ್ಲಿ ಬೆಳಿಗ್ಗೆ ಹೊರಟರೆ ಒಮ್ಮೆ ಸುತ್ತಿ ಬರುವುದರಲ್ಲಿ ಸಂಜೆಯಾಗುತ್ತದೆ'. ಅಲ್ಲಿನ ಕೆಲಸಗಾರ ಹೇಳಿದ.

'ಓ ಅಷ್ಟೇನಾ, ನನ್ನ ಜಮೀನನ್ನು ನನ್ನ ಗಾಡಿಯಲ್ಲಿ ಸುತ್ತಿ ಬರಲು ಮೂರು ದಿನಗಳಾದರೂ ಬೇಕು'.

'ಹಾಗಿದ್ದರೆ ನೀವು ಭಾರೀ ಜಮೀನ್ದಾರರೇ ಇರಬೇಕು, ಅಂದಹಾಗೆ ನಿಮ್ಮ ಹತ್ತಿರ ಇರುವುದು ಯಾವ ಮಾಡೆಲ್ ಗಾಡಿ'.

'ನಮ್ಮ ದೇಶದಲ್ಲಿ ಎತ್ತಿನ ಗಾಡಿಗೆಲ್ಲಾ ಮಾಡೆಲ್ ಹೇಳಲ್ಲ'!

★★★

## ಸಮೀಕ್ಷೆ

ವಿಶ್ವಸಂಸ್ಥೆ ಒಂದು ಸಮೀಕ್ಷೆ ನಡೆಸಿತು. ಅದರ ವಿಷಯ ಹೀಗಿತ್ತು;

'ದಯವಿಟ್ಟು ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿನ ಆಹಾರ ಕೊರತೆಯ ಪರಿಹಾರಕ್ಕೆ ನಿಮ್ಮ ಪ್ರಾಮಾಣಿಕ ಅಭಿಪ್ರಾಯ ನೀಡಿ'

ಆದರೆ ಸಮೀಕ್ಷೆ ಪೂರ್ಣ ತೋಪಾಯಿತು. ಯಾಕೆ ಗೊತ್ತಾ?

★ಆಫ್ರಿಕಾದ ಜನರಿಗೆ ಆಹಾರವೆಂದರೆ ಏನೆಂದು ಗೊತ್ತಿರಲಿಲ್ಲ

★ಭಾರತದವರಿಗೆ ಪ್ರಾಮಾಣಿಕವೆಂದರೆ ಏನೆಂದು ಗೊತ್ತಿರಲಿಲ್ಲ

★ಯೂರೋಪ್‌ನವರಿಗೆ ಕೊರತೆಯೆಂದರೆ ಏನೆಂದು ಗೊತ್ತಿರಲಿಲ್ಲ

★ಚೀನಾದವರಿಗೆ ಅಭಿಪ್ರಾಯವೆಂದರೆ ಏನೆಂದು ಗೊತ್ತಿರಲಿಲ್ಲ

★ಮಧ್ಯಪ್ರಾಚ್ಯ ದೇಶಗಳಿಗೆ ಪರಿಹಾರವೆಂದರೆ ಏನೆಂದು ಗೊತ್ತಿರಲಿಲ್ಲ

★ದಕ್ಷಿಣ ಅಮೇರಿಕಾದ ಜನರಿಗೆ ದಯವಿಟ್ಟು ಅಂದರೆ ಏನೆಂದು ಗೊತ್ತಿರಲಿಲ್ಲ

★ಅಮೇರಿಕಾದವರಿಗೆ ಮೂರನೇ ಜಗತ್ತು ಇದೆ ಅಂತಾನೇ ಗೊತ್ತಿರಲಿಲ್ಲ!

★★★

## ಬಹುಮಾನ?

ಅತ್ತೆ ತನ್ನ ನಾಲ್ಕು ಅಳಿಯಂದಿರನ್ನು ಪರೀಕ್ಷಿಸಬೇಕೆಂದು ನಿರ್ಧರಿಸಿದಳು. ನಾನು ನಾಲ್ಕು ಬಾರಿ ನೀರಿಗೆ ಹಾರುತ್ತೇನೆ, ಪ್ರತೀ ಸಾರಿ ನಿಮ್ಮಲ್ಲಿ ಒಬ್ಬೊಬ್ಬರು ನನ್ನನ್ನು ಮೇಲೆತ್ತಿ ಬದುಕಿಸಬೇಕೆಂದು ಎಲ್ಲರನ್ನೂ ಕರೆದು ಹೇಳಿದಳು.

ಮೊದಲನೆ ಬಾರಿ ಹಿರಿ ಅಳಿಯ ಅತ್ತೆಯನ್ನು ಬದುಕಿಸಿ ಕರೆದುಕೊಂಡ ಬಂದಾಗ ಅವನಿಗೆ ಕಾರು ಬಹುಮಾನವಾಗಿ ಸಿಕ್ಕಿತು.

ಎರಡನೆ ಅಳಿಯ ಸ್ಕೂಟರ್ ಬಹುಮಾನ ಪಡೆದ.

ಮೂರನೆಯ ಅಳಿಯನಿಗೆ ಅತ್ತೆಯನ್ನು ನೀರಿನಿಂದ ಎತ್ತಿದ್ದಕ್ಕಾಗಿ ಕೇವಲ ಮೊಪೆಡ್ ಬಹುಮಾನವಾಗಿ ಸಿಕ್ಕಿತು.

ನಾಲ್ಕನೆ ಅಳಿಯ ಯೋಚಿಸಿದ. ಬಹುಮಾನಗಳ ಸರಣಿಯನ್ನು ನೋಡಿದರೆ ನನಗೆ ಸಿಗುವುದು ಬಹುಶಃ ಸೈಕಲ್ ಮಾತ್ರ, ಅದಕ್ಕಾಗಿ ಇಷ್ಟೆಲ್ಲಾ ಯಾಕೆ ಕಷ್ಟಪಡಬೇಕೆಂದು ಅತ್ತೆ ನೀರಿಗೆ ಹಾರಿದರೂ ಸುಮ್ಮನೆ ನೋಡುತ್ತಾ ನಿಂತಿದ್ದ.

ಈಜು ಬರದ ಅತ್ತೆ ಸತ್ತೇ ಹೋದಳು. ಮಾವ ಕೊನೇ ಅಳಿಯನಿಗೆ ಮರ್ಸಿಡಿಸ್ ಬೆಂಜ್ ಕಾರನ್ನು ಬಹುಮಾನವಾಗಿ ನೀಡಿದ!

ಸಂಗ್ರಹ: ನಡಹಳ್ಳಿ ವಸಂತ್, ಶಿವಮೊಗ್ಗ

